NOVEMBER 01, 2026

AKASHAVANI - DHARWAD

PRADESH SAMACHARA (KANNADA) 07.05 A.M.

<><><>

ಪ್ರಸಾರ ಭಾರತಿ, ಆಕಾಶವಾಣಿ

ಧಾರವಾಡ

ಪ್ರದೇಶ ಸಮಾಚಾರ

<><><>

ಆಕಾಶವಾಣಿಯ, ನಮ್ಮ ಆತ್ಮೀಯ ಕೇಳುಗರಿಗೆಲ್ಲ, ಕರ್ನಾಟಕ ರಾಜ್ಯೋತ್ಸವದ,
ಹಾರ್ದಿಕ ಶುಭಾಶಯಗಳು.

<><><>

ಮುಖ್ಯಾಂಶಗಳು

<><><>

- **71ನೇ ಕರ್ನಾಟಕ ರಾಜ್ಯೋತ್ಸವ:** ನಾಡಿನಾದ್ಯಂತ ಸಂಭ್ರಮಾಚರಣೆ.
- **ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ:** 26 ವಿವಿಧ ಕ್ಷೇತ್ರಗಳ, 71 ಜನ ಸಾಧಕರಿಗೆ, ಇಂದು ಮುಖ್ಯಮಂತ್ರಿ ಪ್ರದಾನ.
- **ಉಡುಪಿ ಜಿಲ್ಲೆ, ಕಾಂತಾವರದ ಕನ್ನಡ ಸಂಘಕ್ಕೆ,** 51ನೇ ಸಂಸ್ಥಾಪನಾ ದಿನಾಚರಣೆ.
- **ಆಕಾಶವಾಣಿ ಧಾರವಾಡ ಕೇಂದ್ರದ,** ಪ್ರಾದೇಶಿಕ ಸುದ್ದಿ ವಿಭಾಗಕ್ಕೆ, ಇಂದಿಗೆ, 45 ವರ್ಷಗಳು ಪೂರ್ಣ.

<><><>

ಈಗ ವಾರ್ತೆಗಳ ವಿವರ

<><><>

<><><>

ಉದಯವಾಗಲಿ ನಮ್ಮ ಚೆಲ್ವ ಕನ್ನಡನಾಡು.. 20 ಸೆಕೆಂದುಗಳು

<><><>

ಕರ್ನಾಟಕ ಕುಲಪುರೋಹಿತ, ಆಲೂರು ವೆಂಕಟರಾಯರು, 1905 ರಲ್ಲಿ, ಎಲ್ಲ ಕನ್ನಡಿಗರನ್ನು ಒಂದೇ ರಾಜ್ಯದಡಿ ತರಲು, ಕರ್ನಾಟಕ ಏಕೀಕರಣ ಚಳವಳಿಯನ್ನು ಆರಂಭಿಸಿದರು. 'ಕರ್ನಾಟಕ ಗತವೈಭವ' ಕೃತಿಯ ಮೂಲಕ ಅವರು, ಕನ್ನಡಿಗರಲ್ಲಿ ನಾಡು–ನುಡಿಯ ಬಗ್ಗೆ, ಜಾಗೃತಿ ಮೂಡಿಸಿದರು. ಬಿ.ಎಂ. ಶ್ರೀಕಂಠಯ್ಯ, ಕುವೆಂಪು, ಗೊರೂರು ರಾಮಸ್ವಾಮಿ ಅಯ್ಯಂಗಾರ, ಕೆಂಗಲ್ ಹನುಮಂತಯ್ಯ ಮೊದಲಾದ, ನುಡಿ ಸೇವಕರು, ಅವಿರತ ಶ್ರಮಿಸಿದರು. ಚಳವಳಿಯ ಪರಿಣಾಮ, ರಾಜ್ಯಗಳ ಪುನರ್ ಸಂಘಟನಾ ಕಾಯ್ದೆ ಅಡಿ, 1956ರ ನವೆಂಬರ್ 1 ರಂದು, ಮದ್ರಾಸ, ಬಾಂಬೆ, ಹೈದರಾಬಾದ ಮತ್ತು ಮೈಸೂರು ರಾಜ್ಯಗಳಲ್ಲಿದ್ದ, ಕನ್ನಡ ಭಾಷಿಕ ಪ್ರದೇಶಗಳನ್ನು ವಿಲೀನಗೊಳಿಸಿ, 'ಮೈಸೂರು ರಾಜ್ಯ'ವನ್ನು ರಚಿಸಲಾಯಿತು. ಎಸ್. ನಿಜಲಿಂಗಪ್ಪ ಅವರು, ಏಕೀಕೃತ ರಾಜ್ಯದ, ಮೊದಲ

ಮುಖ್ಯಮಂತ್ರಿಯಾದರು. 1973ರ ನವೆಂಬರ್ 1 ರಂದು, ಅಂದಿನ ಮುಖ್ಯಮಂತ್ರಿ ಡಿ. ದೇವರಾಜ ಅರಸು, 'ಕರ್ನಾಟಕ' ಎಂದು ಮರುನಾಮಕರಣ ಗೊಳಿಸಿದರು. ಅಂದಿನಿಂದ, ಪ್ರತಿ ವ ರ್ಷ ನವೆಂಬರ್ 1 ರಂದು, ಕರ್ನಾಟಕ ರಾಜ್ಯೋತ್ಸವವನ್ನು ಆಚರಿಸಲಾಗುತ್ತಿದೆ.

<><><>

ರಾಜ್ಯಪಾಲರಾದ ಡಾಕ್ಟರ್ ಸುಧಾ ಯಾದವ, ನಾಡಿನ ಸಮಸ್ತ ಜನತೆಗೆ, ಕನ್ನಡ ರಾಜ್ಯೋತ್ಸವದ ಶುಭಾಶಯ ಕೋರಿದ್ದಾರೆ. ತಮ್ಮ ಸಂದೇಶದಲ್ಲಿ, ಕರ್ನಾಟಕ ರಾಜ್ಯ, ತಂತ್ರಜ್ಞಾನ, ಶಿಕ್ಷಣ, ವಿಜ್ಞಾನ, ನಾವೀನ್ಯತೆ, ಏರೋಸ್ಪೇಸ್, ಕೈಗಾರಿಕೆಗಳು ಮತ್ತು ಉದ್ಯಮಶೀಲತೆಯ ಪ್ರಮುಖ ಕೇಂದ್ರವಾಗಿ ಗುರುತಿಸಿಕೊಂಡಿದೆ. ನಮ್ಮ ರಾಜ್ಯ, ರಾಷ್ಟ್ರದ ಪ್ರಗತಿಗೆ ಮಹತ್ವದ ಕೊಡುಗೆ ನೀಡುತ್ತಿದೆ. ಈ ನಂಟು, ಇಲ್ಲಿನ ಜನರ ಆತ್ಮೀಯತೆ, ಉದಾರತೆ ಮತ್ತು ಪ್ರೀತಿ, ತಮಗೆ ಹೆಮ್ಮೆ ತಂದಿದೆ, ಎಂದಿದ್ದಾರೆ.

<><><>

ಕನ್ನಡವೆಂಬುದು ಕೇವಲ ಭಾ ೆಯಲ್ಲ, ಅದು ನಮ್ಮ ಅಸ್ಮಿತೆ, ಆತ್ಮಗೌರವ ಮತ್ತು ಬದುಕಿನ ಉಸಿರು. ಕನ್ನಡದ ಕಂಪು ಜಗದಗಲ ಪಸರಿಸಲಿ, ಕನ್ನಡಿಗರ ಹೆಮ್ಮೆ ನಿತ್ಯವೂ ಬೆಳಗಲಿ. ನಾಡು, ನುಡಿ, ನೆಲ, ಜಲದ ರಕ್ಷಣೆಯ ಸಂಕಲ್ಪದೊಂದಿಗೆ, ಸಮಸ್ತ ಕನ್ನಡಿಗರಿಗೆ ಕನ್ನಡ ರಾಜ್ಯೋತ್ಸವದ ಹಾರ್ದಿಕ ಶುಭಾಶಯಗಳು ಎಂದು, ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ ತಿಳಿಸಿದ್ದಾರೆ.

<><><>

ನಾಡು–ನುಡಿಯ ಸೇವೆಯಲ್ಲಿ ಸಾರ್ಥಕ್ಯ ಕಂಡ, ಕನ್ನಡ ನಾಡಿನ, 26 ವಿವಿಧ ಕ್ಷೇತ್ರಗಳ 71 ಜನ ಸಾಧಕರಿಗೆ, ಪ್ರತಿಷ್ಠಿತ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿಯನ್ನು, ಇಂದು, ಸಂಜೆ ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ, ಮುಖ್ಯಮಂತ್ರಿಯವರು, ಪ್ರದಾನಿಸಿ, ಗೌರವಿಸಲಿದ್ದಾರೆ. ಪ್ರಶಸ್ತಿ 5 ಲಕ್ಷ ರೂಪಾಯಿ ನಗದು, 25 ಗ್ರಾಂ ಚಿನ್ನದ ಪದಕ ಒಳಗೊಂಡಿದ್ದು, ಬೆಳಗಾವಿಯ ಕೆ.ಎಲ್.ಇ. ಆಸ್ಪತ್ರೆಯ ಖ್ಯಾತ ಚಿಕ್ಕಮಕ್ಕಳ ಮಧುಮೇಹ ತಜ್ಞೆ ಡಾಕ್ಟರ್ ಸುಜಾತಾ ಮಲ್ಲಿಕಾರ್ಜುನ ಜಾಲಿ, ರಾಜ್ಯೋತ್ಸವ ಪ್ರಶಸ್ತಿಗೆ ಭಾಜನರಾಗಿದ್ದಾರೆ. ಅವರು ತಮ್ಮ ಸಂತಸ ಹಂಚಿಕೊಂಡಿದ್ದಾರೆ.

<><><>

ಡಾಕ್ಟರ್ ಸುಜಾತಾ ಜಾಲಿ ಧ್ವನಿ 45 ಸೆಕೆಂದುಗಳು

<><><>

ಉಡುಪಿ ಜಿಲ್ಲೆ, ಕಾಂತಾವರದ ಕನ್ನಡ ಸಂಘ, 51ನೇ ವರ್ಷದ ಸಂಭ್ರಮದಲ್ಲಿದೆ. ಇಂದು ಬೆಳಗ್ಗೆ 10 ಗಂಟೆಗೆ, ಕಾಂತಾವರ ರಥ ಬೀದಿಯ, ಕನ್ನಡ ಭವನದಲ್ಲಿ, ಎಂಟು ದತ್ತಿ ನಿಧಿಗಳು ಮತ್ತು ವಾರ್ಷಿಕ ಪ್ರಶಸ್ತಿ ಹಾಗೂ 'ನಾಡಿಗೆ ನಮಸ್ಕಾರ' ಗ್ರಂಥ ಮಾಲೆಯ, ನೂತನ ಹೊತ್ತಗೆಗಳ ಅನಾವರಣ ಸಮಾರಂಭ, ಹಿರಿಯ ಸಾಹಿತಿ ಡಾಕ್ಟರ್ ನಾ. ಮೊಗಸಾಲೆ ಅಧ್ಯಕ್ಷತೆಯಲ್ಲಿ, ನಡೆಯಲಿದೆ. ಖ್ಯಾತ ಶಿಕ್ಷಕ ಹಾಗೂ ಕಲಾವಿದ, ಗದಗ ಜಿಲ್ಲೆ ಬನ್ನಿಕೊಪ್ಪದ, ಸುರೇಶ ವೆಂಕಟೇಶ ಕುಲಕರ್ಣಿ ಅವರು, ಪ್ರೊಫೆಸರ್ ಜಿ.ಎಂ. ಹೆಗಡೆ ದತ್ತಿ, 'ಅನನ್ಯ ಕಲಾವಿದ, ಆದರ್ಶ ಶಿಕ್ಷಕ ಪ್ರಶಸ್ತಿ'ಗೆ ಭಾಜನರಾಗಿದ್ದಾರೆ. 10 ಸಾವಿರ ರೂಪಾಯಿ ನಗದು ಹಾಗೂ ತಾಮ್ರ ಪತ್ರ ಒಳಗೊಂಡಿದೆ. ಸುರೇಶ ಕುಲಕರ್ಣಿ ಅವರು, ತಮ್ಮ ಅನಿಸಿಕೆ ಹಂಚಿಕೊಂಡಿದ್ದಾರೆ.

<><><>

ಸುರೇಶ ಕುಲಕರ್ಣಿ ಧ್ವನಿ 40 ಸೆಕೆಂದುಗಳು

<><><>

ಈಗ ಪ್ರಕಟಣೆ, ನಂತರ ಪ್ರದೇಶ ಸಮಾಚಾರ ಮುಂದುವರೆಯುವುದು..

(37 ಸೆಕೆಂದುಗಳು)

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

1981, ನವೆಂಬರ್ 1 ರ, ರಾಜ್ಯೋತ್ಸವ ದಿನದಂದೇ, ಆಕಾಶವಾಣಿ ಧಾರವಾಡ ಕೇಂದ್ರದ, ಪ್ರಾದೇಶಿಕ ಸುದ್ದಿ ವಿಭಾಗ ಸಹ ಕಾರ್ಯಾರಂಭಿಸಿತು. ಇಂದಿಗೆ, ಸಾರ್ಧಕ 45 ವರ್ಷಗಳ ಸೇವೆಯನ್ನು ಪೂರ್ಣಗೊಳಿಸಿತು. ಕಿತ್ತೂರು ಹಾಗೂ ಕಲ್ಯಾಣ ಕರ್ನಾಟಕ ಭಾಗದ, ನೆಲ, ಜಲ, ಜನ, ಭಾಷೆ, ಬದುಕು, ಸಮಸ್ಯೆ, ಸಾಧನೆ ಹಾಗೂ ಸಂಸ್ಕೃತಿಯ ಧ್ವನಿಯಾಗಿ, ಆಕಾಶವಾಣಿಯ ರಾಷ್ಟ್ರೀಯ ಪ್ರಸಾರ ವ್ಯವಸ್ಥೆಯಲ್ಲಿ, ಒಂದು ವಿಶಿಷ್ಟ ಛಾಪನ್ನು ಮೂಡಿಸಿದ, ಪ್ರಾದೇಶಿಕ ಸುದ್ದಿ ವಿಭಾಗ, ಮಹತ್ವದ ಮೈಲಿಗಲ್ಲು ತಲುಪಿದೆ. ಗದಗ ಜಿಲ್ಲೆಯ ರೈತರ, ಕೃಷಿ ಪ್ರಯೋಗಗಳಾಗಲಿ, ವಿಜಯಪುರ ಜಿಲ್ಲೆಯ, ನೀರಾವರಿ ಸಮಸ್ಯೆಯಾಗಲಿ, ಬಾಗಲಕೋಟೆ ಜಿಲ್ಲೆಯ, ಜನಜೀವನದ ಸವಾಲುಗಳಾಗಲಿ, ಬೆಳಗಾವಿಯ ಸಾಂಸ್ಕೃತಿಕ ಚಟುವಟಿಕೆಯಾಗಲಿ, ಬೀದರ ಹಾಗೂ ಕಲಬುರಗಿಯ, ಸಾಂಪ್ರದಾಯಿಕ ಕರಕುಶಲ ಕಲೆಗಾರಿಕೆ, ಉತ್ತರಕನ್ನಡದ ಪರಿಸರ ಕಾಳಜಿ ಹಾಗೂ ಧಾರವಾಡದ, ಶಾಸ್ತ್ರೀಯ ಸಂಗೀತದ ಬಗ್ಗೆ, ರಾಜ್ಯದ ಗಮನ ಸೆಳೆಯುವಲ್ಲಿ, ಪ್ರದೇಶ ಸಮಾಚಾರ, ಸೇತುವೆಯಾಗಿದೆ.

<><><>

71ನೇ ಕರ್ನಾಟಕ ರಾಜ್ಯೋತ್ಸವ ಸಂಭ್ರಮದ ಹಿನ್ನೆಲೆ, ಕನ್ನಡಿಗರ ಪ್ರಾತಿನಿಧಿಕ ಸಂಸ್ಥೆ, ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘ, ನವೆಂಬರ್ ಪೂರ್ತಿ, ಕನ್ನಡ ತಿಂಗಳಾಗಿ ಆಚರಿಸುತ್ತಿದೆ. ರಾಜ್ಯಸಭೆ ಸಂಸದ, ಪ್ರೊಫೆಸರ್ ಮಾ.ನಾಗರಾಜ, ಇಂದು ಸಂಜೆ, 5.30ಕ್ಕೆ 'ತಿಂಗಳ ಪೂರ್ತಿ ರಾಜ್ಯೋತ್ಸವ' ಕಾರ್ಯಕ್ರಮಕ್ಕೆ, ಚಾಲನೆ ನೀಡಲಿದ್ದಾರೆ. ಈ ಕುರಿತು, ಮಾಹಿತಿ ನೀಡಿದ್ದಾರೆ, ಕರ್ನಾಟಕ ವಿದ್ಯಾವರ್ಧಕ ಸಂಘದ ಉಪಾಧ್ಯಕ್ಷ, ಡಾಕ್ಟರ್ ಸಂಜೀವ ಕುಲಕರ್ಣಿ.

<><><>

ಡಾಕ್ಟರ ಸಂಜೀವ ಕುಲಕರ್ಣಿ ಧ್ವನಿ 55 ಸೆಕೆಂದುಗಳು

<><><>

ತನಿಖೆ ಮತ್ತು ವಿಧಿವಿಜ್ಞಾನ ಕ್ಷೇತ್ರದಲ್ಲಿ, ಅತ್ಯುತ್ತಮ ಸೇವೆ ಸಲ್ಲಿಸಿದ, ರಾಜ್ಯದ ಏಳು ಜನ ಪೊಲೀಸ್ ಅಧಿಕಾರಿಗಳು ಹಾಗೂ ಸಿಬ್ಬಂದಿಗೆ, ಪ್ರಸಕ್ತ ಸಾಲಿನ, ಪ್ರತಿಷ್ಠಿತ 'ಕೇಂದ್ರೀಯ ಗೃಹಮಂತ್ರಿಯವರ ದಕ್ಷತಾ ಪದಕ' ಪ್ರಕಟಿಸಲಾಗಿದೆ. ಬೆಳಗಾವಿ ನಗರದ ಮಾಳಮಾರುತಿ ಪೊಲೀಸ್ ಠಾಣೆಯ, ಪೊಲೀಸ್ ಇನ್ಸ್‌ಪೆಕ್ಟರ್ ಬಾವುದ್ದೀನ್ ಗಡೇಕರ್, ರಾಯಚೂರಿನ ದೇವದುರ್ಗ ಪೊಲೀಸ್ ಠಾಣೆಯ ಪೊಲೀಸ್ ಇನ್ಸ್‌ಪೆಕ್ಟರ್ ಮಂಜುನಾಥ, ಮೈಸೂರಿನ ಪ್ರಾದೇಶಿಕ ವಿಧಿವಿಜ್ಞಾನ ಪ್ರಯೋಗಾಲಯದ ಉಪನಿರ್ದೇಶಕ ಡಾಕ್ಟರ್ ಚಂದ್ರಶೇಖರ, ಸೇರಿದಂತೆ 7 ಜನ ಭಾಜನರಾಗಿದ್ದಾರೆ.

<><><>

ಹುಬ್ಬಳ್ಳಿ ಶೂಟಿಂಗ್ ಅಕಾಡೆಮಿ, ಯುವ ಶೂಟರ್, ಐಶ್ವರ್ಯಾ ರವಿಚಂದ್ರ ಬಾಲೆಹೊಸುರು, ಕತಾರ್‌ನ ದೋಹಾದಲ್ಲಿ, ಇಂದಿನಿಂದ 14ನೇ ತಾರೀಖಿನ ವರೆಗೆ ನಡೆಯಲಿರುವ, ವಿಶ್ವ ಶೂಟಿಂಗ್ ಚಾಂಪಿಯನ್‌ಷಿಪ್‌ನಲ್ಲಿ, ಭಾರತವನ್ನು ಪ್ರತಿನಿಧಿಸಲಿದ್ದಾರೆ. ವಿಶ್ವದ 90ಕ್ಕೂ ಹೆಚ್ಚು ದೇಶಗಳ, ಸಾವಿರಕ್ಕೂ ಅಧಿಕ ಕ್ರೀಡಾಪಟುಗಳು ಭಾಗವಹಿಸುತ್ತಿರುವ ಈ ಸ್ಪರ್ಧೆಯಲ್ಲಿ, ಐಶ್ವರ್ಯಾ 50 ಮೀಟರ್ ಫ್ರೀ ಪಿಸ್ತೂಲ್ ವಿಭಾಗದಲ್ಲಿ ಸ್ಪರ್ಧಿಸಲಿದ್ದಾರೆ.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- **71ನೇ ಕರ್ನಾಟಕ ರಾಜ್ಯೋತ್ಸವ:** ನಾಡಿನಾದ್ಯಂತ ಸಂಭ್ರಮಾಚರಣೆ.
- **ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ:** 26 ವಿವಿಧ ಕ್ಷೇತ್ರಗಳ, 71 ಜನ ಸಾಧಕರಿಗೆ, ಇಂದು ಮುಖ್ಯಮಂತ್ರಿ ಪ್ರದಾನ.
- **ಉಡುಪಿ ಜಿಲ್ಲೆ, ಕಾಂತಾವರದ ಕನ್ನಡ ಸಂಘಕ್ಕೆ,** 51ನೇ ಸಂಸ್ಥಾಪನಾ ದಿನಾಚರಣೆ.
- **ಆಕಾಶವಾಣಿ ಧಾರವಾಡ ಕೇಂದ್ರದ,** ಪ್ರಾದೇಶಿಕ ಸುದ್ದಿ ವಿಭಾಗಕ್ಕೆ, ಇಂದಿಗೆ, 45 ವರ್ಷಗಳು ಪೂರ್ಣ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.

<><><>